ಡಿಡಬ್ಲ್ಯೂ.1: ಎಸ್.ಕೆ. ನಿಂಗರಾಜು

**ಲಘು ವ್ಯವಹಾರಗಳ ಹಾಗೂ ಎಸಿಜೆಎಂ ನ್ಯಾಯಾಲಯ**
**ಬೆಂಗಳೂರು**
**ಸಿಸಿ ನಂಬರ್:11032/2021**

| | |
|---|---|
| ಸಾಕ್ಷಿದಾರರ ಹೆಸರು | ಎಸ್.ಕೆ. ನಿಂಗರಾಜು |
| ತಂದೆಯ ಹೆಸರು | ಕೆಂಪೇಗೌಡ |
| ವಯಸ್ಸು | 63 ವರ್ಷ |
| ಉದ್ಯೋಗ | ನಿವೃತ್ತಿ ನೌಕರ |
| ವಾಸಸ್ಥಳ | ಇಟ್ಟಮಡು, ಬೆಂಗಳೂರು. |

**ದಿನಾಂಕ:12.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ: ಆರೋಪಿ ಪರ ವಕೀಲರಿಂದ:**

ಪಿರ್ಯಾದುದಾರರು ನನ್ನ ತಾಯಿಯ ತಮ್ಮನ ಮಗಳು. ನನ್ನ ಹೆಂಡತಿಗೂ ಪಿರ್ಯಾದುದಾರರಿಗೂ ಗಲಾಟೆಯಾಗಿತ್ತು. ನಾನು ನಿವೃತ್ತಿಯಾದ ನಂತರ ಬಾರುಗಳಿಗೆ ಕಡಲೆಬೀಜ ಇತರೆ ಬೀಜಗಳನ್ನು ಮಾರಾಟ ಮಾಡಲು ಹೋಗುತ್ತೇನೆ. ನನ್ನ ದ್ವಿಚಕ್ರ ವಾಹನದಲ್ಲಿ ಪ್ರೊನೋಟು ಮತ್ತು ಚೆಕ್ಕುಗಳನ್ನು ಇಟ್ಟುಕೊಂಡಿದ್ದೆನು. ಪಿರ್ಯಾದುದಾರರಾದ ಸುಜಾತ ಹಾಗೂ ಕಾವ್ಯ ಎಂಬುವವರು ದ್ವಿಚಕ್ರ ವಾಹನದಲ್ಲಿದ್ದಂತಹ ಚೆಕ್ಕು ಮತ್ತು ಪ್ರೊನೋಟನ್ನು ಕದ್ದಿರುತ್ತಾರೆ. ಪಿರ್ಯಾದುದಾರರಾದ ಸುಜಾತರವರು ನನ್ನ ಚೆಕ್ಕನ್ನು ಹಾಜರುಪಡಿಸಿರುತ್ತಾರೆ.

ಪಿರ್ಯಾದುದಾರರು ನೀಡಿರುವ ನೋಟೀಸು ನನಗೆ ತಲುಪಿರುವುದಿಲ್ಲ. ನ್ಯಾಯಾಲಯದಿಂದ ಬಂದಂತಹ ನೋಟೀಸನ್ನು ನಮ್ಮ ಬಾಡಿಗೆದಾರರಾದ ನಯನ ರವರ ಮುಖಾಂತರ ನೋಟಸೀಸನ್ನು ಓದಿಸಿ ತಿಳಿದುಕೊಂಡೆನು, ನಂತರ ನಾನು ಪಿರ್ಯಾದುದಾರರ ಮನೆಗೆ ಹೋಗಿ ಅವರನ್ನು ಭೇಟಿಯಾಗಿ ನೋಟೀಸಿನ ಬಗ್ಗೆ ವಿಚಾರಿಸಿದೆನು. ಆಗ ಪಿರ್ಯಾದುದಾರರು ನೀನು ಏನು ಮಾಡಿಕೊಳ್ಳುತ್ತಿಯೋ ಮಾಡಿಕೋ ಎಂದು ಉತ್ತರಿಸಿದರು. ಆ

**ಡಿಡಬ್ಲ್ಯೂ.1: ಎಸ್.ಕೆ. ನಿಂಗರಾಜು**

ಕಾರಣ ನಾನು ಪೊಲೀಸ್ ಠಾಣೆಗೆ ಹಾಗೂ ಕಮಿಷನರ್ ಆಫ್ ಪೊಲೀಸ್ ಗೂ ಸಹ ದೂರು ಸಲ್ಲಿಸಲು ಹೋದೆನು, ಆಗ ಅವರು ಈಗಾಗಲೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುವ ಕಾರಣ ಅಲ್ಲೇ ಬಗೆಹರಿಸಿಕೊಳ್ಳಿ ಎಂದು ತಿಳಿಸಿದರು. ನನ್ನ ಹಾಗೂ ಪಿರ್ಯಾದುದಾರರ ನಡುವೆ ಯಾವುದೇ ಹಣಕಾಸಿನ ವ್ಯವಹಾರವಾಗಿರುವುದಿಲ್ಲ. ಪಿರ್ಯಾದುದಾರರಿಗೆ ಸಾಲ ನೀಡುವಷ್ಟು ಆರ್ಥಿಕ ಸಾಮರ್ಥ್ಯ ಇರಲಿಲ್ಲ. ನಾನು ಪಿರ್ಯಾದುದಾರರಿಗೆ ಯಾವುದೇ ಹಣ ನೀಡಬೇಕಾಗಿಲ್ಲ. ಪಿರ್ಯಾದುದಾರರು ಹಾಗೂ ನನ್ನ ಹೆಂಡತಿಯ ನಡುವೆ ಜಗಳವಾಗಿದ್ದು ಆ ವೇಳೆಯಲ್ಲಿ ನಾನು ಪಿರ್ಯಾದುದಾರರಿಗೆ ಹಲ್ಲೆ ಮಾಡಿದ ಕಾರಣ ಅದರ ದ್ವೇಷಕ್ಕಾಗಿ ನನ್ನ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ನನ್ನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಕೃಷ್ಣಮೂರ್ತಿ ಎಂಬುವವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಪ್ರೊನೋಟನ್ನು ಪಿರ್ಯಾದುದಾರರ ಮಗಳಾದ ಕಾವ್ಯ ಎಂಬುವವರು ಬರೆದಿರುತ್ತಾರೆ. ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತಾರೆ ಆದ್ದರಿಂದ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ಕೋರಿಕೊಳ್ಳುತ್ತೇನೆ.

**ದಾಖಲಾತಿಗಳ ಹಾಜರಾತಿಗಾಗಿ ಕಾಲಾವಕಾಶ ಕೋರಿದ್ದು, ದಾಖಲಾತಿಗಳ ಹಾಜರಾತಿಗಾಗಿ ಮಾತ್ರ ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದ್ದೆ)**

**(ಓ. ಹೇ. ಕೇ. ಸ. ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು